C.R.P.67

Form No.4 (Civil)
Deposition Sheets
(R.P.No.57)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಎಸ್ ಸಿ ಸಂಖ್ಯೆಃ **135/2024**

ಪ್ರಾಸಾ. **07** ಚಾಸಾ. **09**

| | | |
|---|---|---|
| ಸಾಕ್ಷಿದಾರರ ಹೆಸರು | : | ತೇಜಸ್ವಿಸಿ |
| ತಂದೆಯ ಹೆಸರು | : | ಸೋಮರಾಜು |
| ವಯಸ್ಸು | : | 17 ವರ್ಷಗಳು |
| ಉದ್ಯೋಗ | : | ವಿದಾರ್ಥಿ |
| ವಾಸ | : | ವೀರಭದ್ರೇಶ್ವರ ನಗರ, ಬೆಂಗಳೂರು. |

**(**ಪ್ರಸ್ತುತ ಸಾಕ್ಷಿ ಅಪ್ರಾಪ್ತ ವಯಸ್ಕಳಾಗಿದ್ದು**,** ಪ್ರಶ್ನಿಸಿದಾಗ ಆಕೆ ದ್ವಿತೀಯ ಪದವಿ ಪೂರ್ವ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವುದಾಗಿ ಮತ್ತು ತಾನು ವಿಜ್ಞಾನ ವಿಷಯಗಳನ್ನು ಐಚ್ಚಿಕ ವಿಷಯಗಳನ್ನಾಗಿ ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸಿದ್ದು ಸಾಕ್ಷಿ ತನಗೆ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರ ನೀಡುವ ಸ್ಥಿತಿಯಲ್ಲಿರುವುದರಿಂದ ಸಾಕ್ಷಿಯನ್ನು ವಿಚಾರಣೆಗೆ ಪ್ರಮಾಣವಚನ ಭೋದಿಸಿ ಒಳಪಡಿಸಲಾಗಿದೆ**.)**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **29.04.2026.**

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಪ್ರಕರಣದ ಸಾಕ್ಷಿ ಚಾ.ಸಾ-1 ನನ್ನ ತಾಯಿ. ಚಾ.ಸಾ-8 ನನ್ನ ತಾಯಿಯ ತಾಯಿ. ನಾವುಗಳು ವೀರಭದ್ರೇಶ್ವರ ನಗರದ ನಿವಾಸಿಗಳು. ನನಗೆ ಆರೋಪಿ ಗೊತ್ತು.

2. ನನ್ನ ತಾಯಿ ಮತ್ತು ಅಜ್ಜಿ ಹೋಟೆಲ್ ವ್ಯಾಪಾರ ಮಾಡುತ್ತಾರೆ. ಆರೋಪಿಯು ಘಟನೆಯ ನಿಖಟ ಪೂರ್ವ 5 ವರ್ಷಗಳ ಹಿಂದಿನ ದಿನಗಳಲ್ಲಿ ನನ್ನ ತಾಯಿಯ ಹೋಟೆಲ್ ನ ಗ್ರಾಹಕನಾಗಿದ್ದು ಕಾರಣ ಪರಿಚಯವಿರುತ್ತಾನೆ.

3. ನನ್ನ ವಿದ್ಯಾಭ್ಯಾಸದ ಶುಲ್ಕವನ್ನು ಭರಿಸಲು ಮತ್ತು ನಮ್ಮ ಹೋಟೆಲ್ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ನನ್ನ ತಾಯಿ ಆರೋಪಿಯಿಂದ 40,000/- ರೂಗಳನ್ನು ಸಾಲವಾಗಿ ಪಡೆದಿದ್ದು ಸದರಿ ಮೊತ್ತದ ಪೈಕಿ 10,000/- ರೂಗಳನ್ನು ನನ್ನ ತಾಯಿ ಹಿಂದಿರುಗಿಸಿದ್ದರು.

4. ದಿನಾಂಕ 14.07.2023 ರ ರಾತ್ರಿ ಆರೋಪಿ ಹೋಟೆಲ್ ಬಳಿ ಬಂದಾಗ ನಾನು ಮತ್ತು ನನ್ನ ತಾಯಿ ಹೋಟೆಲ್ ವ್ಯಾಪಾರ ಮುಗಿಸಿ ಬಾಗಿಲು ಹಾಕುತ್ತಿದ್ದೆವು. ಪರಿಣಾಮ ನನ್ನ ತಾಯಿ ಆರೋಪಿಯನ್ನು ಮರುದಿನ ಬೆಳಗ್ಗೆ ಹೋಟೆಲ್ ಬಳಿ ಬರಲು ತಿಳಿಸಿದರು. ಆದರೆ ನಾವು ತಿಳಿಸಿದಂತೆ ಆತ ಬರಲಿಲ್ಲ.

5. ಮರು ದಿನ ರಾತ್ರಿ ನಾನು ಮತ್ತು ನನ್ನ ಅಜ್ಜಿ ಮನೆಯಲ್ಲಿದ್ದಾಗ ಸುಮಾರು 8-00 ರ ಸುಮಾರಿಗೆ ಆರೋಪಿಯು ಮನೆಯ ಬಳಿ ಬಂದಿದ್ದು ನನ್ನ ಅಜ್ಜಿ, ಆರೋಪಿಗೆ ನನ್ನ ತಾಯಿ ಮನೆಯಲ್ಲಿ ಇಲ್ಲದೇ ಹೋಟೆಲ್ ಬಳಿ ಇರುವುದಾಗಿ ತಿಳಿಸಿದರು. ಆಗ ಆರೋಪಿ ಗಲಾಟೆ ಮಾಡಿ ಹೊರಟುಹೋದರು. ನನ್ನ ತಾಯಿ ನಂತರ ಮನೆಗೆ ಹಿಂದಿರುಗಿದರು. ಆಗ ಆರೋಪಿ ಪುನಃ ಮನೆಯ ಬಳಿ ರಾತ್ರಿ ಅಂದಾಜು 9-30 ಗಂಟೆಗೆ ಬಂದಿರುತ್ತಾರೆ ಹಾಗೂ ತಾನು ಮಾತನಾಡಲೇ ಬೇಕೆಂದು ತಾಕೀತು ಮಾಡಿ ಬಾಗಿಲು ಬಡಿದು ಬಾಗಿಲು ತೆರೆಯಲು ಒತ್ತಾಯಿಸಿದರು.

6. ನಂತರ ನನ್ನ ಅಜ್ಜಿ ಬಾಗಿಲು ತೆಗೆದಾಗ, ಆರೋಪಿ "ನೀವುಗಳು ಮನೆಯ ಒಳಗೇ ಇದ್ದು ಸುಳ್ಳು ನುಡಿಯುತ್ತಿರುವಿರಿ, ಈ ದಿನ ನಾನು ನಿಮ್ಮನ್ನು ಬಿಡುವುದಿಲ್ಲ ಸಾಯಿಸುತ್ತೇನೆ" ಎಂದು ನುಡಿದು ತನ್ನ ಕಿಸೆಯಲ್ಲಿದ್ದಂತಹ ಸ್ಪ್ರೇ ಬಾಟಲ್ ತೆಗೆದು ನನ್ನ ಅಜ್ಜಿಯ ಮುಖಕ್ಕೆ ಸ್ಪ್ರೇ ಮಾಡುತ್ತಾನೆ. ನನ್ನ ಅಜ್ಜಿ ತನ್ನ ಕಣ್ಣುಗಳನ್ನು ಉಜ್ಜಿಕೊಳ್ಳಬೇಕಾದರೆ ಆರೋಪಿ ಸ್ಟಿಕರ್ ಕಟರ್ ಚಾಕುವನ್ನು ಉಪಯೋಗಿಸಿ ನನ್ನ

ಅಜ್ಜಿಯ ಕುತ್ತಿಗೆ ಭಾಗ, ಎಡ ಭುಜ, ಎಡಗೈ ಹಾಗೂ ಎಡ ಕಿವಿಯ ಭಾಗದಲ್ಲಿ ಹಲ್ಲೆ ಮಾಡಿ ರಕ್ತ ಗಾಯ ಮಾಡುತ್ತಾರೆ.

7. ನನ್ನ ತಾಯಿ ನನ್ನ ಅಜ್ಜಿಯನ್ನು ಬಿಡಿಸಿಕೊಳ್ಳಲು ಯತ್ನಿಸಿದಾಗ ನನ್ನ ತಾಯಿಗೂ ಸಹ ಮುಖಕ್ಕೆ ಸ್ಪ್ರೇ ಮಾಡಿ ಅದೇ ಸ್ಟಿಕರ್ ಕಟರ್ ಚಾಕುವನ್ನು ಉಪಯೋಗಿಸಿ ನನ್ನ ತಾಯಿಯ ಕೆನ್ನೆ ಮತ್ತು ಗಲ್ಲದ ಭಾಗಗಳಿಲ್ಲಿ ಹಲ್ಲೆ ಮಾಡುತ್ತಾರೆ.

8. ನಮ್ಮಗಳ ಕಿರುಚುವಿಕೆಯಿಂದ ಮನೆಯ ನರೆಹೊರೆಯವರು ಹಲ್ಲೆಯ ಸ್ಥಳಕ್ಕೆ ಬಂದರು ಆಗ ಆರೋಪಿ ಸ್ಪ್ರೇ ಬಾಟಲ್ ಅನ್ನು ನಮ್ಮ ಮನೆಯಲ್ಲೇ ಬಿಟ್ಟು ನಾನು ನುಡಿದ ಸ್ಟಿಕರ್ ಕಟರ್ ಚಾಕುವನ್ನು ತನ್ನ ಜೊತೆಯಲ್ಲೆ ತೆಗೆದುಕೊಂಡು ಅಲ್ಲಿಂದ ಓಡಿಹೋದನು. ನೆರೆದ ಜನರ ಪೈಕಿ ಯಶೋಧ ಎಂಬುವವರು ಹಾಗೂ ಇತರರು ನಮ್ಮಗಳನ್ನು ಆಟೋ ವಾಹನದಲ್ಲಿ ಮೊದಲು ಅತಿಶಯ ಆಸ್ಪತ್ರೆಗೆ ಕಳುಹಿಸಿದರು. ಸದರಿ ಆಸ್ಪತ್ರೆಯವರು ಹೆಚ್ಚುವರಿ ಚಿಕಿತ್ಸೆ ಗೆ ಸೂಚಿಸಿದ ಪರಿಣಾಮ ಸುಂಕದಕಟ್ಟೆಯ ಲಕ್ಷ್ಮೀ ಆಸ್ಪತ್ರೆಗೆ ಹೋದೆವು. ಸದರಿ ಆಸ್ಪತ್ರೆಯಲ್ಲಿ ನನ್ನ ತಾಯಿ ಮತ್ತು ಅಜ್ಜಿ ಚಿಕಿತ್ಸೆಗೆ ದಾಖಲಾದರು.

9. ಸ್ಪ್ರೇ ಮತ್ತು ಚಾಕುವನ್ನು ಹಾಗೂ ನನ್ನ ತಾಯಿ ಮತ್ತು ಅಜ್ಜಿಯರ ರಕ್ತ ಸಿಕ್ತ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳ ಪೈಕಿ ಈಗ ನನಗೆ ತೋರಿಸಿದ ವಸ್ತುವು ಆರೋಪಿ ಉಪಯೋಗಿಸಿದ ಸ್ಪ್ರೇಯರ್ ಮತ್ತು ಚಾಕು ಇರುತ್ತದೆ ಅವುಗಳನ್ನು ಈಗಾಗಲೇ ಮು.ಮಾ-4 ಮತ್ತು ಮು.ಮಾ-5 ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಸೀರೆ ಮತ್ತು ಕುಪ್ಪಸ ನನ್ನ ಅಜ್ಜಿ ಹಲ್ಲೆಯ ಕಾಲಕ್ಕೆ ಧರಿಸಿದ್ದ ಬಟ್ಟೆಗಳಾಗಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಬಟ್ಟೆಯು ಹಲ್ಲೆಯ ಸಮಯದಲ್ಲಿ ಚಾ.ಸಾ-1 ನನ್ನ ತಾಯಿ ಧರಿಸಿದ್ದ ನೈಟಿ ಬಟ್ಟೆಯಾಗಿದೆ. ಅದನ್ನು ಈಗಾಗಲೇ ಮು.ಮಾ-3 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಶ್ರೀ ಆರ್ ಪಿ ವಕೀಲರಿಂದ ಆರೋಪಿಯ ಪರವಾಗಿಃ</u>

ಆರೋಪಿ ಪರ ವಕೀಲರು ದಂಡ ಪ್ರಕ್ರಿಯೆ ಸಂಹಿತೆ ಕಲಂ 231(2)ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು ಪರಿಣಾಮ, ಪಾಟೀ ಸವಾಲನ್ನು ಮುಂದೂಡಲಾಯಿತು.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.